ಹುಲಿ ಸಂರಕ್ಷಣ ವ್ಯಾಪ್ತಿಗೆ ಬರುವ ಹೋಬಳಿ ಮತ್ತು ಗ್ರಾಮಗಳು

360 (255) ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) ಮಾನ್ಯ ಅರಣ್ಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯೆಯಿಟ್ಟು ತಿಳಿಸುವರೆ:-

(ಅ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಹುಲಿ ಸಂರಕ್ಷಣಾ ಯೋಜನೆಯ ವ್ಯಾಪ್ತಿಗೆ ಬರುವ ಗ್ರಾಮಗಳು ಮತ್ತು ಗ್ರಾಮ ಪಂಚಾಯ್ತಿಗಳು ಯಾವುವು;

(ಆ) ಮೇಲ್ಕಂಡ ಸದರಿ ಯೋಜನೆಗೆ ಎಷ್ಟು ಎಕರೆ ವಿಸ್ತೀರ್ಣದ ಭೂಮಿ ಒಳಪಡುತ್ತದೆ; (ಗ್ರಾಮವಾರು ವಿವರ ನೀಡುವುದು)

(ಇ) ಕರ್ನಾಟಕ ಸರ್ಕಾರವು ಮೇಲ್ಕಂಡ ಯೋಜನೆಗೆ ಪೂರಕವಾದ ಅಧಿಸೂಚನೆ ಹೊರಡಿಸಿದೆಯೇ;

(ಈ) ಹೊರಡಿಸಿದ್ದಲ್ಲಿ, ಸದರಿ ಅಧಿಸೂಚನೆಯನ್ನು ರದ್ದುಪಡಿಸುವಲ್ಲಿ ಸರ್ಕಾರಕ್ಕಿರುವ ಅಡಚಣೆಯೇನು?

ಶ್ರೀ ಸಿ.ಪಿ. ಯೋಗೇಶ್ವರ್ (ಮಾನ್ಯ ಅರಣ್ಯ ಸಚಿವರು):

(ಅ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಹುಲಿ ಸಂರಕ್ಷಣಾ ಯೋಜನೆಯ ಬಫರ್ ವ್ಯಾಪ್ತಿಗೆ ವಾಳಹಳ್ಳಿ ಹಾಗೂ ಆಗುಂಬೆ ಮೀಸಲು ಅರಣ್ಯ ಪ್ರದೇಶಗಳನ್ನು ಮಾತ್ರ ಬಫರ್ ಜೋನ್‌ನಲ್ಲಿ ಸೇರಿಸಿಕೊಳ್ಳಲಾಗಿದ್ದು, ಸದರಿ ಅರಣ್ಯ ಪ್ರದೇಶಗಳು ಸೋಮೇಶ್ವರ ವನ್ಯಧಾಮದ ವ್ಯಾಪ್ತಿಯಲ್ಲಿಯೂ ಸಹ ಸೇರ್ಪಡೆಗೊಂಡಿರುತ್ತದೆ.

ಸದರಿ ಯೋಜನೆಯಲ್ಲಿ ಈ ಕೆಳಕಂಡ ಗ್ರಾಮ ಪಂಚಾಯ್ತಿ ಹಾಗೂ ಗ್ರಾಮಗಳು ಬಫರ್ ಜೋನ್‌ನಲ್ಲಿ ಸೇರಿಸಿಕೊಳ್ಳಲಾಗಿರುತ್ತದೆ.

ಕ್ರ.ಸಂ.	ಗ್ರಾಮ ಪಂಚಾಯ್ತಿ	ಗ್ರಾಮಗಳು
1.	ಆಗುಂಬೆ	ತಲ್ಲೂರು, ಹೊಸುರು
2.	ನಲ್ಲೂರು	ದಾಸನಕೊಡಿಗೆ, ಶುಂಠಿಹಕ್ಲು. ಶಿವಳ್ಳಿ
3.	ಬಿದರಗೋಡು	ಬಾಳಹಳ್ಳಿ

(ಆ) ಸದರಿ ಯೋಜನೆಗೆ 17,664 ಎಕರೆ ಭೂ ಪ್ರದೇಶವು ಒಳಪಡುತ್ತಿದ್ದು, ವಿವರ ಕೆಳಕಂಡಂತಿದೆ.

ಕ್ರ.ಸಂ.	ಗ್ರಾಮ	ವಿಸ್ತೀರ್ಣ
1.	ತಲ್ಲೂರು	3712.36 ಎಕರೆ
2.	ಹೊಸೂರು	3008.07 ಎಕರೆ
3.	ದಾಸನಕೊಡಿಗೆ	1570.99 ಎಕರೆ
4.	ಶುಂಠಿಹಕ್ಲು	4974.20 ಎಕರೆ
5.	ಶಿವಳ್ಳಿ	153.99 ಎಕರೆ
6.	ಬಾಳಹಳ್ಳಿ	4244.39 ಎಕರೆ

(ಇ) ಕರ್ನಾಟಕ ಸರ್ಕಾರವು ಮೇಲ್ಕಂಡ ಯೋಜನೆಗೆ ಪೂರಕವಾದ ಅಧಿಸೂಚನೆ ಹೊರಡಿಸುವುದಿಲ್ಲ.

(ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಅಭಿವೃದ್ಧಿ ಕಾಮಗಾರಿಗಳಿಗೆ ಆಗುವ ತೊಂದರೆಗಳು

362 (258) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) ಮಾನ್ಯ ಅರಣ್ಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯೆಯಿಟ್ಟು ತಿಳಿಸುವರೇ:-

(ಅ) ಅರಣ್ಯ ಇಲಾಖೆಯವರು ರಸ್ತೆ ಕಾಮಗಾರಿಗಳಿಗೆ ಜಲ್ಲಿ, ಮರಳು ಸಾಗಾಣಿಕೆಗೆ ಸರ್ಕಾರಿ ಇಲಾಖೆಯ ಇತರೆಯವರಿಗೆ ಅಡಚಣೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಅರಣ್ಯ ಇಲಾಖೆಯವರು ಕಂದಾಯ ಇಲಾಖೆಯ ಜಮೀನುಗಳಿಗೆ ಅಳತೆಗೆ ಒಳಪಡಿಸದೆ, ಪೋಡಿ ಮಾಡದೆ, ಟಿಪ್ಪಣಿ ವ್ಯಾಪ್ತಿಗೆ ಬರದ ತಮ್ಮದೇ ಪ್ರತ್ಯೇಕ ನಕಾಶೆಯನ್ನು ತಯಾರು ಮಾಡಿ ಅಧಿಕೃತವೆಂದು ಇತರೆಯವರಿಗೆ ದಿನನಿತ್ಯ ಕಿರುಕುಳ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?